# SCCH-04

**ಸಾಕ್ಷಿಯನ್ನು ದಿನಾಂಕ: 01.02.2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು** ಕುಮಾರಿ ಮೊನಿಕಾ 1 ನೇ ಎದುರುದಾರರ ಪರ ವಕೀಲರಿಂದಃ-

ನಾನು ಅಸಲು ಅರ್ಜಿದಾರರಾದ ರಾಜಶೇಖರ್ ಮಗಳೂರು ರವರಿಗೆ ಪತ್ನಿಯಾಗಿರುತ್ತೇನೆ. ಅಸಲು ಅರ್ಜಿದಾರರಾದ ರಾಜಶೇಖರ್ ಮಗಳೂರು ರವರು ಈ ಪ್ರಕರಣದಲ್ಲಿ ವಿಚಾರಣೆಯನ್ನು ನೀಡಲು ನನಗೆ ಅಧಿಕಾರ ಪತ್ರವನ್ನು ನೀಡಿರುವುದಿಲ್ಲ. ಅಪಘಾತದ ದಿನದಂದು ನಾನು ಬಳ್ಳಾರಿಯಲ್ಲಿ ಇದ್ದೆನು. ಅಪಘಾತದ ವಿಚಾರವನ್ನು ಸಂಚಾರಿ ಪೇದೆಯವರು ನನ್ನ ಪತಿಯ ಮೊಬೈಲ್ ನಿಂದ ದೂರವಾಣಿ ಕರೆ ಮಾಡಿ ತಿಳಿಸಿರುತ್ತಾರೆ. ಅಸಲು ಅರ್ಜಿದಾರರಾದ ರಾಜಶೇಖರ್ ಮಗಳೂರು ರವರು ಸಂಪೂರ್ಣವಾಗಿ ಹಾಸಿಗೆ ಹಿಡಿದಿರುವ ಬಗ್ಗೆ ಮಾನ್ಯ ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿರುತ್ತೇನೆ.

ಅಸಲು ಅರ್ಜಿದಾರರಾದ ರಾಜಶೇಖರ್ ಮಗಳೂರು ರವರ ಪತ್ನಿ ಎಂದು ತೋರಿಸಲು ನಾನು ಆಧಾರ್ ಕಾರ್ಡ್ ಅನ್ನು ಹಾಜರುಪಡಿಸಿರುತ್ತೇನೆ. ಸದರಿ ಆದಾರ್ ಕಾರ್ಡ್ ಅನ್ನು ಹೊರತುಪಡಿಸಿ ಇತರೆ ದಾಖಲೆಗಳಲ್ಲಿ ಅಂದರೆ ಬ್ಯಾಂಕ್ ಪಾಸ್ ಬುಕ್ಕಿನ ನಾಮಿನಿ ಮತ್ತು ನನ್ನ ಗಾಯಳು ಪತಿಯ ಕಚೇರಿಯ ದಾಖಲೆಗಳಲ್ಲಿ ನನ್ನ ಹೆಸರು ನಾಮಿನಿ ಎಂದು ನಮೂದಿಸಿರುತ್ತದೆ ಸದರಿ ದಾಖಲೆಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ಮತ್ತು ಅಸಲು ಅರ್ಜಿದಾರರಾದ ರಾಜಶೇಖರ್ ಮಗಳೂರು ರವರ ವಿವಾಹವಾಗಿ 18 ವರ್ಷವಾಗಿರುತ್ತದೆ. ಅಸಲು ಅರ್ಜಿದಾರರಾದ ರಾಜಶೇಖರ್ ಮಗಳೂರು ರವರು ಬಿ ಇ, ಎಂ ಬಿ ಎ ಇನ್ ಪೈನಾನ್ಸ್ ವ್ಯಾಸಂಗವನ್ನು ಮಾಡಿದ್ದರು. ಅಸಲು ಅರ್ಜಿದಾರರಾದ ರಾಜಶೇಖರ್ ಮಗಳೂರು ರವರು ಜಿ ಅಪ್ಲಾಯನ್ಸೆಸ್ ನಲ್ಲಿ senior system analyst ಆಗಿ ಕೆಲಸ ಮಾಡುತ್ತಿದ್ದರು. ಅಪಘಾತದ ದಿನದಂದು ಸಹ ಅಸಲು ಅರ್ಜಿದಾರರಾದ ರಾಜಶೇಖರ್ ಮಗಳೂರು ರವರು ಜಿ ಅಪ್ಲಾಯನ್ಸೆಸ್ ನಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ಗಾಯಳು

ಪತಿಯ ಕೆಲಸದ ವೇಳೆ ಏನು ಎಂದು ಸೂಚಿಸಿದರೆ ಸಾಕ್ಷಿಯು ಘಟನಾ ದಿನದಂದು ಗುಡ್ ಪ್ರೈಡೆ ಇದ್ದು ರಜೆ ದಿನ ಆಗಿತ್ತು ಎಂದು ಉತ್ತರಿಸುತ್ತಾರೆ. ಕೊರೊನಾ ಸಮಯದಲ್ಲಿ ನಾವು 2 ವರ್ಷ ಬಳ್ಳಾರಿಯಲ್ಲಿ ಇದ್ದೆವು. ನನ್ನ ಗಾಯಾಳು ಪತಿಯ ಕಚೇರಿಯಿಂದ ಕೆಲಸಕ್ಕೆ ಬರಬೇಕೆಂದು ದೂರವಾಣಿ ಕರೆ ಬಂದ ಕಾರಣ ನಾವುಗಳು ಬೆಂಗಳೂರಿಗೆ ಬಂದೆವು. ನಾವು ಇದ್ದ ಬಾಡಿಗೆ ಮನೆಯ ನವೀಕರಣಕ್ಕಾಗಿ ಮನೆಯನ್ನು ಖಾಲಿ ಮಾಡಬೇಕೆಂದು ಮನೆ ಮಾಲೀಕರು ತಿಳಿಸಿದ ಕಾರಣ ರಜೆ ದಿನದಂದು ನನ್ನ ಗಾಯಾಳು ಪತಿಯು ಮನೆಯ ಸಾಮಾಗ್ರಿಗಳನ್ನು ಪ್ಯಾಕ್ ಮಾಡಿಸಲು ಘಟನಾ ಸ್ಥಳಕ್ಕೆ ಬಂದಿದ್ದರು. ಆ ಪೂರ್ವದಲ್ಲಿ ವರ್ಕ್ ಪ್ರಂ ಹೋಂ ಲಭ್ಯವಿತ್ತ ಸಾಕ್ಷಿ ಮುಂದುವರೆದು ಅಪಘಾತದ ಹಿಂದಿನ ದಿನ ಅಮೃತಹಳ್ಳಿಯಲ್ಲಿ ಒಂದು ಮನೆಯನ್ನು ಬಾಡಿಗೆಗೆ ಪಡೆದಿದ್ದರೂ ಎಂದು ಉತ್ತರಿಸುತ್ತಾರೆ.

ಅಸಲು ಅರ್ಜಿದಾರರಾದ ರಾಜಶೇಖರ್ ಮಗಳೂರು ರವರು ಮಾನಸಿಕ ಅಸ್ವಸ್ಥರು ಎಂದು ತೋರಿಸಲು ಮಾನ್ಯ ನ್ಯಾಯಾಲಯಕ್ಕೆ ವೈದ್ಯರ ವರದಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ಮುಂದುವರೆದು ವೈದ್ಯರು ಪ್ರಮಾಣಪತ್ರವನ್ನು ಸಹ ನೀಡಿರುತ್ತಾರೆ ಎಂದು ಉತ್ತರಿಸುತ್ತಾರೆ. ನಿಪಿ 8 ರ ಪ್ರಕಾರ ರಿಲಿವಿಂಗ್ ಲೆಟರ್ ಆಗಿದ್ದು ನನ್ನ ಗಾಯಾಳು ಪತಿಯು ತದನಂತರದಲ್ಲಿ ಯಾವ ಉದ್ಯೋಗಕ್ಕೆ ಸೇರಿರುತ್ತಾರೆ ಎಂದು ಸೂಚಿಸಿದರೆಸಾಕ್ಷಿಯು ಸದರಿಯವರು ಹಾಸಿಗೆ ಹಿಡಿದಿರುವ ಕಾರಣ ಯಾವುದೇ ಉದ್ಯೋಗವನ್ನು ಮಾಡುತ್ತಿಲ್ಲ ಎಂದು ಉತ್ತರಿಸುತ್ತಾರೆ. ಅಸಲು ಅರ್ಜಿದಾರರಾದ ರಾಜಶೇಖರ್ ಮಗಳೂರು ರವರ ತಂದೆ ತಾಯಿಗಳಿಗೆ ಅಂದಾಜು 70 ವರ್ಷ ವಯಸ್ಸು. ಆದಾಯ ತೆರಿಗೆ ದಾಖಲೆಯ ಪಾರಂ 26-ಎ ಎಸ್ ಅನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ನಾನು ಬಿ ಇ ವ್ಯಾಸಂಗ ಮಾಡಿದ್ದು 2014 ರವರೆಗೆ ಉದ್ಯೋಗವನ್ನು ಮಾಡಿರುತ್ತೇನೆ. ನನ್ನ ಪಾರಂ 26 ಎ ಎಸ್ ಅನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇದೆ. ಅಸಲು ಅರ್ಜಿದಾರರಾದ ರಾಜಶೇಖರ್ ಮಗಳೂರು ರವರು ಆರೋಗ್ಯವಾಗಿದ್ದು ಸದರಿಯವರು ಮಾನಸಿಕ ಸದೃಡರಾಗಿದ್ದಾರೆ ಮತ್ತು ಯಾವ ತೊಂದರೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಅಸಲು

ಅರ್ಜಿದಾರರಾದ ರಾಜಶೇಖರ್ ಮಗಳೂರು ರವರು ಆರೋಗ್ಯವಾಗಿದ್ದರೂ ನಾನು ಸದರಿಯವರ ಪರವಾಗಿ ಈ ಪ್ರಕರಣದಲ್ಲಿ ಸುಳ್ಳು ವಿಚಾರಣೆಯನ್ನು ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನನ್ನ ಗಾಯಾಳು ಪತಿಯ ಪರವಾಗಿ ವಿಚಾರಣೆಯನ್ನು ನೀಡಲು ಅರ್ಹಳಲ್ಲ ಆದರೂ ಪರಿಹಾರದ ಹಣವನ್ನು ಪಡೆಯಲು ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**(ಓ.ಹೇ.ಕೇ.ಸ.ಇ.)**

**18ನೇ ಹೆಚ್ಚುವರಿ ನ್ಯಾಯಾಧೀಶರು**
**ಲಘು ವ್ಯವಹಾರಗಳ ನ್ಯಾಯಾಲಯ**
**ಬೆಂಗಳೂರು.**